


■ ಚಿದಾನಂದ ಸಾಲಿ
ಕಲೆ: ಎಚ್. ಎಸ್. ಮೋನಪ್ಪ

# ಗಂಜಿ ಕೇಂದ್ರಕ್ಕೆ ಲಗ್ಗೆ

ಹಿಂದಿನ ದಿನದಿಂದಲೇ ಬಂದಿದ್ದ ಅವರು ನಿನ್ನೆ ರಾತ್ರಿ ಅಲ್ಲಿಯ ಸಾಲಿಗುಡಿಯಲ್ಲೇ ಮಲಗಿದ್ದರೆಂದು ಊರವರು ಹೇಳಿದ್ದನ್ನು ಕೇಳಿ 'ಎನ್ಸರ್ ಇದು? ಈ ಮಕ್ಳ ಕೋಮುವಾದಿ ಅಜೆಂಡಾ ಕೇಳಿ ಇಷ್ಟು ದಿವ್ಸ ಅಸಹ್ಯ ಅನಿಸ್ತಿತ್ತು. ಪರವಾಗಿಲ್ಲ ಇವ್ರೊಳಗೂ ಮನುಷ್ಯತ್ವ ಐತೆ' ಆಶ್ಚರ್ಯಬೆರೆತ ಮೆಚ್ಚುಗೆಯನ್ನು ಅನುಮಾನಪಡುತ್ತ ವ್ಯಕ್ತಪಡಿಸಿದ ಅಬ್ದುಲ್ಲ.

'ಹಂಗ ಒಂದೇ ಸಲಕ್ಕ ಅವರನ್ನ ಒಪ್ಪಕೂ ಆಗದಿಲ್ಲರೀ ಅಬ್ದುಲ್. 'ಮಾಡದೆಲ್ಲ ಅನಾಚಾರ, ಮನೆ ಮುಂದೆ ಬೃಂದಾವನ' ಅಂತ ಗಾದೆ ಮಾತು ಐತೆಲ್ಲ. ಹಂಗ ವರ್ಷಪೂರ್ತಿ ಕೋಮುವಾದಿ ಅಜೆಂಡಾ ಇಟ್ಕಂಡು ಕೆಲ್ಸ ಮಾಡಿ ಯಾವಾಗನ್ನ ಒಮ್ಮೆ ಇಂಥ ಕೆಲಸ ನಿಷ್ಠೆಯಿಂದ ಮಾಡಿದ ಮಾತ್ರಕ್ಕೆ ಅವ್ರನ್ನ ಒಪ್ಪಿಕಳ್ಳದು ನನಗಂತೂ ಆಗದಿಲ್ಲ' ಎಂದ ತಿಮೋತಿ.

'ವಾಹ್ ಏನ್ ಮಾತು ಹೇಳಿದ್ರಿ ಸರ್. ನಮ್ ಎನ್‌ಜಿಓಗಳಾಗ ಇದೊಂದು ಪಾಪುಲರ್ ಟ್ರಿಕ್. ಮೀಡಿಯಾ ಮತ್ತೆ ಸೊಸೈಟಿಗಳ ಅಟೆನ್ಷನ್ ಇರುವಾಗ ಟಾಪ್ ಪೋಸ್ಟಿನ್ಯಾಗ ಇರುವವರು ಕಸ ಗುಡಿಸಿ, ಟಾಯ್ಲೆಟ್ ಕ್ಲೀನ್ ಮಾಡಿ ತೋರಿಸಿ ಪ್ರಚಾರದ ಅಡ್ವಾಂಟೇಜ್ ತಗೊಂಡು ಬುಡ್ತಾರ. ಸೊಸೈಟಿಗೆ ಮೆಸೇಜ್ ಪಾಸ್ ಆಯ್ತು. ಮೀಡಿಯಾದಲ್ಲಿ ಇಮೇಜ್ ಬಿಲ್ಡಪ್ ಆಯ್ತು. ಅಷ್ಟು ಟಾಪ್ ಆಫೀಸರೇ ಮಾಡಿದನಂದ ಮ್ಯಾಲೆ ಉಳಿದ ಸಬ್‌ಸ್ಟಾಫ್ ಮ್ಯಾಲೆ ಇನ್‌ಡೈರೆಕ್ಟ್ ಪ್ರೆಜರೂ ಕ್ರಿಯೇಟ್ ಆಯ್ತು' ಅಂದ ಅಬ್ದುಲ್ಲ.

